UNIVERSITY OF AGRICULTURAL SCIENCES, DHARWAD

KRISHI VIGYAN KENDRA

SAIDAPUR FARM, DHARWAD -580 005

Newsletter

Issue 30, July-September, 2014 Ph : 0836-2444272 e-mail : pc_kvkd@rediffmail.com website : www.kvkdharwad.org

# Krishi Mela-2014 "Soil Health - Farmers Wealth"

The Krishi Mela-2014 was organized at UAS, Dharwad from 27-30 September, 2014 with the theme of "Soil Health Farmers Wealth". The mega event was inaugurated by Shri. Siddaramayya, Hon'ble Chief Minister, Govt. of Karnataka. A total of 11 lakh people comprising farmers, farm women, representatives from development departments, agribusiness sectors, NGOs, State Government officials and other stake holders in agriculture participated in the event. During this mela, Shri Basavaraj Huchhayyanavar of Chikkamalligawad village, Dharwad Tq. and Smt. Annapurna V. Latti of Hebbal village, Navalagund Tq. were honoured with district level Shreshta Krishika and Shreshta Krishi Mahile awards of 2014 respectively. The KVK scientists participated in various committees of Krishi Mela and showcased the latest technologies and crop varieties with live samples.






During the Krishi Mela, Shri Yamanappa Neelakantappa Alnavar of Dharwad taluk, Shri Praveen Ishwarappa Sherewad of Navalagund taluk, Shri Erappa Basappa Baliger of Kalaghatagi taluk and Shri Muttanna Jayappa Radder of Hubballi taluk were honoured with taluka level Shreshta Yuva Krishika awards. Similarly, Smt. Pushpa Muddappa Chikkannavar of Navalagund taluk and Smt. Pratibha Mallikarjun Haddannavar of Kalaghatagi taluk were honoured with Shreshta Yuva Krishi Mahile at taluka level.













## 15th Scientific Advisory Committee meeting







The 15th Scientific Advisory Committee meeting of KVK, Dharwad was held on July 07, 2014. Dr. D. P. Biradar, Hon'ble Vice Chancellor, UAS, Dharwad, in his presidential remarks appreciated the activities and suggested to initiate the drought mitigating measures and also advised to create awareness on importance of genetically modified crops. Dr. Sreenath Dixit, Zonal Project Director (Zone-VIII) ICAR, Bengaluru suggested to take up alternative contingent cropping plan on priority basis. In the eve of decennial year of KVK, Dharwad he informed to organize more extension activities for the benefit of the farming community. Dr. M. B. Chetti, Director of Extension, UAS, Dharwad briefed about the KVK activities. Dr. S. M. Mantur, Programme Co-ordinator presented the progress report, action taken on previous SAC meeting and action plan. During this occasion Scientific Advisory Committee members and representatives from farming community actively involved and contributed suggestions for development of KVK. Dr. Sreenath Dixit, Zonal Project Director, Dr. S. M. Mantur, Programme Co-ordinator along with the Subject Matter Specialists visited different FLD plots and discussed with the beneficiaries.

## Celebration of Vanamahotsava

Krishi Vigyan Kendra, Saidapur Farm, Dharwad celebrated Vanamahotsava under the FLD component on Integrated Farming System. Different fruit crops were planted in the fields of Shri. Gangappa Hittalamani of Kunkur village, Kundagol Tq. and Shri. Adavayyaswami Kallimath of Garag village, Dharwad Tq. on July 19, 2014 and August 12, 2014 respectively by farmers and KVK staff. Similarly, Vanamahotsava was also celebrated in Krishi Vigyan Kendra, Saidapur Farm on August 26, 2014 by planting different varieties of fruit crops.







## Visit abroad



Dr. S. M. Mantur, Professor (Horticulture) and Programme Co-ordinator, KVK Dharwad participated in the 29th International Horticulture Congress 2014 held at Brisbane, Australia between 17-22, August 2014 and presented the research paper on “High tunnel systems maintain phytonutrient levels in lettuce”. During the Congress, he chaired the session on Fruit & Vegetables for Health. Dr. Mantur visited Australian Centre for International Agricultural Research (ACIAR), Canberra and had meeting with Dr. M. Ejaz Qureshi, Research Project Manager, Agricultural Development Policy and Dr. Peter Horne, General Manager, Country Programs. He also visited Commonwealth Scientific and Industrial Research Organization (CSIRO), Canberra and discussed with the scientists about the present research priorities of the centre.

# Sponsored Training Programmes

The KVK, Dharwad under the sponsorship of Coconut Development Board, Regional Office, Bengaluru organized the training programme on “FOCT-Palm Climbing and Plant Protection” of 6 days duration for 3 batches on 14-19, July and 25-30, September 2014. The programme was inaugurated by Dr. M. B. Chetti, Director of Extension, UAS, Dharwad. Smt. Sheela Bhandarkar, District Manager, NABARD, Dharwad was present during the function. Dr. D. P. Biradar, Hon'ble Vice-Chancellor, UAS, Dharwad and Chief Guest of the closing ceremony suggested the youths to be self-reliant by making effective use of palm climbing cycle and address the labor problem effectively. A total of 60 trainees from Dharwad, Haveri & Bagalkot districts participated in the training programme and were benefited. The Hon'ble Vice Chancellor distributed palm climbing cycles and certificates to the participants.







The off campus training programmes on “Crop production technology” were organized under the NABARD sponsored Pilot project on Technology transfer, Credit Counseling and Market Advocacy through Farmers clubs in Dharwad district for raitakuta members through master trainers. Totally 13 off campus training programmes were organized under the guidance of KVK, Dharwad between August 9 to September 20, 2014 covering different villages Linganakoppa, Neerasagar, Mukkal, Dyavanakonda, Dastikoppa, Belavantara, Morab, Halligeri, Mulamuttal, Jeeragawad, Shedabal-Khanapur and Chabbi.





# Visit to Wireworm infested onion field



A team of KVK scientists visited different onion fields at different villages *viz.*, Morab, Gummagol and Shirur and Ayatti of Navalagund taluk on July 7, 2014. During the visit, the infestation of wireworm on onion crop was noticed for the first time on larger area and the infestation level was to the tune of 15-20 %. Further the farmers were informed that the infestation of pest results in considerable yield loss. For effective management of wireworm, as adhoc recommendation the application of Rynaxypyr or Fipronil granules @ 6 kg/ac along with equal quantity of sand on moist soil Or spraying of Lessent (Imidacloprid 40 % + Fipronil 40%) @ 0.25 g or Chlorpyriphos @ 2 ml/l of water was suggested. The farmers were advised to spray the insecticide so that the complete root zone of the crop is moist.

# Dignitaries Visit





A team of scientific delegates from Bunda College, Malawi, Lilongwe University of Agriculture and Natural Resources, Africa comprising Dr. Vernon Kabambe, Agronomist, Dr. Moses Maliro, Plant Breeder, Dr. Patson Nalivata, Soil Chemist, Dr. Trust Kasambala, Agril Entomologist and Dr. Josef Djanza, Agricultural Economist with Ms. Namitha Bansal from Sathguru Consultants, Hyderabad visited KVK, Dharwad on July 23, 2014.

Dr. George Kanyama Phiri, Vice Chancellor and Dr. Charles Macphery Masangano of Lilongwe University of Agriculture and Natural Resources, Bunda Campus, Lilongwe, Malawi, Dr. Geoffrey Kananji, Country Co-ordinator, Alliance for Green Revolution in Africa, Malawi along with Shri Suresh, Sathguru Consultants, Hyderabad visited KVK, Dharwad on August 11, 2014.



Dr. R. S. Paroda, former Director General, ICAR & Secretary, DARE, GoI along with Dr. D. P. Biradar, Hon'ble Vice Chancellor, Dr. B. M. Khadi, Director of Research, UAS, Dharwad visited KVK, Saidapur Farm on August 16, 2014





Dr. N. K. Krishnakumar, Deputy Director General (Horticulture), ICAR, New Delhi and Dr. D. L. Maheswar, Hon'ble Vice Chancellor, UHS, Bagalkot along with Dr. D. P. Biradar, Hon'ble Vice Chancellor, UAS, Dharwad visited KVK, Saidapur Farm on August 20, 2014. Dr. S. M. Mantur, Programme Co-ordinator welcomed the delegates. Dr. N. K. Krishnakumar and Dr. D. L. Maheswar briefed about the scope of horticulture in research and interacted with scientists and students of Horticulture Department of UAS, Dharwad. During this occasion, Dr. D. P. Biradar felicitated Dr. D. L. Maheswar.

During the visits, Dr. S. M. Mantur, Programme Co-ordinator, explained about different demonstration units and outreach activities of KVK, Dharwad. The dignitaries interacted with KVK scientists regarding various extension programmes.

**Editor & Publisher** : **Dr. S. M. Mantur**
Programme Co-ordinator, Krishi Vigyan Kendra, Dharwad
**Associate Editors** : **Dr. K. P. Gundannavar**, **Dr. S. M. Hiremath**, **Dr. Uma N. Kulkarni**, **Smt. Shailaja N. Galagali**, **Dr. C. J. Kumar**
**Type Setting and Design** : **DTP Unit,** Publicattion Center, UAS, Dharwad
**Typing** : Shri. Santosh B. Kumbar

**From**
**Programme Co-ordinator**
**Krishi Vigyan Kendra, Saidapur Farm**
**Dharwad 580 005 (Karnataka)**
**Telephone : 0836-2444272**
**E-mail : pc_kvkd@rediffmail.com**
**Website : www.kvkdharwad.org**

**To,**

**Book Post**

# ಕೃಷಿ ವಿಶ್ವವಿದ್ಯಾಲಯ, ಧಾರವಾಡ

# ಕೃಷಿ ವಿಜ್ಞಾನ ಕೇಂದ್ರ

ಸೈದಾಪುರ ಫಾರ್ಮ, ಧಾರವಾಡ -580 005

ವಾರ್ತಾ ಪತ್ರ

ಸಂಪುಟ : 30 ಜುಲೈ–ಸಪ್ಟೆಂಬರ್ 2014, Ph: 0836-2444272 ಮಿಂಚಂಚೆ : pc_kvkd@rediffmail.com ಅಂತರ್ಜಾಲ : www.kvkdharwad.org


## ಕೃಷಿ ಮೇಳ–2014 "ಮಣ್ಣಿನ ಆರೋಗ್ಯ – ಕೃಷಿಕರ ಸೌಭಾಗ್ಯ"

ಕೃಷಿ ವಿಶ್ವವಿದ್ಯಾಲಯ, ಧಾರವಾಡದ 2014 ನೇ ಸಾಲಿನ ಕೃಷಿ ಮೇಳವನ್ನು "ಮಣ್ಣಿನ ಆರೋಗ್ಯ–ಕೃಷಿಕರ ಸೌಭಾಗ್ಯ" ಎಂಬ ಧ್ಯೆಯೋದ್ದೇಶದೊಂದಿಗೆ ದಿನಾಂಕ 27 ರಿಂದ 30 ಸೆಪ್ಟೆಂಬರ್ 2014 ರವರೆಗೆ ಹಮ್ಮಿಕೊಳ್ಳಲಾಗಿತ್ತು. ಕರ್ನಾಟಕ ಸರಕಾರದ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ. ಸಿದ್ದರಾಮಯ್ಯನವರು ಕೃಷಿಮೇಳಕ್ಕೆ ಚಾಲನೆ ನೀಡಿದರು. ಈ ಮೇಳಕ್ಕೆ ಸುಮಾರು 11 ಲಕ್ಷ ಜನರು ಕೃಷಿ ಸಂಬಂಧಿತ ಸಂಶೋಧನಾ ತಾಕು ಹಾಗೂ ವಸ್ತು ಪ್ರದರ್ಶನದಲ್ಲಿ ಭಾಗವಹಿಸಿ ಮಾಹಿತಿ ಪಡೆದರು. ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು, ಕೃಷಿ ಮೇಳದ ವಿವಿಧ ಸಮಿತಿಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ನೂತನ ತಳಿ ಹಾಗೂ ಸುಧಾರಿತ ತಂತ್ರಜ್ಞಾನಗಳನ್ನು ಪ್ರದರ್ಶಿಸಿ ರೈತ ಸಮುದಾಯಕ್ಕೆ ಮಾಹಿತಿ ನೀಡಿದರು. ಇದೇ ಸಂದರ್ಭದಲ್ಲಿ ಧಾರವಾಡ ತಾಲೂಕಿನ ಚಿಕ್ಕಮಲ್ಲಿಗವಾಡ ಗ್ರಾಮದ ಪ್ರಗತಿಪರ ರೈತರಾದ ಶ್ರೀಯುತ ಬಸವರಾಜ ವಿ. ಹುಚ್ಚಯ್ಯನವರ ಹಾಗೂ ನವಲಗುಂದ ತಾಲೂಕಿನ ಹೆಬ್ಬಾಳ ಗ್ರಾಮದ ಶ್ರೀಮತಿ ಅನ್ನಪೂರ್ಣ ವಿ. ಲಠ್ಠಿ ಇವರುಗಳಿಗೆ ಅನುಕ್ರಮವಾಗಿ 2014 ನೇ ಸಾಲಿನ ಶ್ರೇಷ್ಠ ಕೃಷಿಕ ಹಾಗೂ ಶ್ರೇಷ್ಠ ಕೃಷಿ ಮಹಿಳೆ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.







ಇದೆ ಸಂದರ್ಭದಲ್ಲಿ ಕೃಷಿ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಏಳು ಜಿಲ್ಲೆಗಳ ಪ್ರತಿ ತಾಲೂಕಿನಿಂದ ಶ್ರೇಷ್ಠ ಯುವ ಕೃಷಿಕ ಹಾಗೂ ಶ್ರೇಷ್ಠ ಯುವ ಕೃಷಿಮಹಿಳೆ ಪ್ರಶಸ್ತಿಯನ್ನು ನೀಡಲಾಯಿತು. ಧಾರವಾಡ ಜಿಲ್ಲೆಯ ಧಾರವಾಡ ತಾಲೂಕಿನಿಂದ ಶ್ರೀ. ಯಮನಪ್ಪ ನೀಲಕಂಠಪ್ಪ ಅಳ್ನಾವರ, ನವಲಗುಂದ ತಾಲೂಕಿನಿಂದ ಶ್ರೀ. ಪ್ರವೀಣ ಈಶ್ವರಪ್ಪ ಶೆರೇವಾಡ ಮತ್ತು ಶ್ರೀಮತಿ ಪುಷ್ಪಾ ಮುದ್ದಪ್ಪ ಚಿಕ್ಕಣ್ಣವರ, ಕಲಘಟಗಿ ತಾಲೂಕಿನಿಂದ ಶ್ರೀ ಈರಪ್ಪ ಬಸಪ್ಪ ಬಳಿಗೇರ ಮತ್ತು ಶ್ರೀಮತಿ ಪ್ರತಿಭಾ ಮಲ್ಲಿಕಾರ್ಜುನ ಹದ್ದಣ್ಣವರ ಹಾಗೂ ಹುಬ್ಬಳ್ಳಿ ತಾಲೂಕಿನಿಂದ ಶ್ರೀ ಮುತ್ತಣ್ಣ ಜಯಪ್ಪ ರಡ್ಡೇರ ಅನುಕ್ರಮವಾಗಿ ಶ್ರೇಷ್ಠ ಯುವ ಕೃಷಿಕ ಹಾಗೂ ಶ್ರೇಷ್ಠ ಯುವ ಕೃಷಿಮಹಿಳೆ ಪ್ರಶಸ್ತಿಯೊಂದಿಗೆ ಸನ್ಮಾನಿತಗೊಂಡರು.













## 15 ನೇ ವೈಜ್ಞಾನಿಕ ಸಲಹಾ ಸಮಿತಿ ಸಭೆ







ಕೇಂದ್ರದ 15 ನೇ ವೈಜ್ಞಾನಿಕ ಸಲಹಾ ಸಮಿತಿ ಸಭೆಯನ್ನು ದಿನಾಂಕ 07.07.2014 ರಂದು ಆಯೋಜಿಸಲಾಗಿತ್ತು. ಧಾರವಾಡ ಕೃಷಿ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಡಾ. ಡಿ. ಪಿ. ಬಿರಾದಾರ ಇವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಕೇಂದ್ರದ ಕಾರ್ಯ ಚಟುಚಟಿಕೆಗಳ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿ, ಮುಂಬರುವ ತರಬೇತಿ ಕಾರ್ಯಕ್ರಮಗಳಲ್ಲಿ ಕುಲಾಂತರಿ ಬೆಳೆಗಳ ಬಗ್ಗೆ ಮಾಹಿತಿ ಹಾಗೂ ವಿಸ್ತರಣಾ ಚಟುವಟಿಕೆಗಳನ್ನು ಹೆಚ್ಚಿನ ಮಟ್ಟದಲ್ಲಿ ಪ್ರಚಾರ ಪಡಿಸಲು ಸಮೂಹ ಮಾಧ್ಯಮಗಳ ಸಹಾಯ ಪಡೆಯಲು ಕೋರಿದರು. ಹವಾಮಾನದ ವೈಪರಿತ್ಯಕ್ಕನುಗುಣವಾಗಿ ಪರ್ಯಾಯ ಬೆಳೆ ಯೋಜನೆಯ ಚಟುವಟಿಕೆಗಳನ್ನು ಹಮ್ಮಿಕೊಳ್ಳುವಂತೆ ಸೂಚಿಸಿದರು. ಬೆಂಗಳೂರಿನ ವಲಯ–8 ರ ಯೋಜನಾ ನಿರ್ದೇಶಕರಾದ ಡಾ. ಶ್ರೀನಾಥ ದೀಕ್ಷಿತ್ ಇವರು ತುರ್ತಾಗಿ ಪರ್ಯಾಯ ಬೆಳೆ ಯೋಜನೆ ಹಮ್ಮಿಕೊಳ್ಳುವಂತೆ ಹಾಗೂ ಕೃಷಿ ವಿಜ್ಞಾನ ಕೇಂದ್ರ ದಶಕದ ಸಂಭ್ರಮದಲ್ಲಿರುವದರಿಂದ ಇನ್ನಷ್ಟು ಹೆಚ್ಚಿನ ಪ್ರಮಾಣದಲ್ಲಿ ರೈತರ ಸೇವೆಗೈಯುವಂತೆ ಸಲಹೆ ನೀಡಿದರು. ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶಕರಾದ ಡಾ. ಎಂ. ಬಿ. ಚೆಟ್ಟಿ ಇವರು ಕೇಂದ್ರದ ಕಾರ್ಯ ಚಟುವಟಿಕೆ ಕುರಿತು ಮಾಹಿತಿ ನೀಡಿದರು. ಕೇಂದ್ರದ ಕಾರ್ಯಕ್ರಮ ಸಂಯೋಜಕರಾದ ಡಾ. ಎಸ್. ಎಂ. ಮಂಟೂರ ಇವರು ಹಿಂದಿನ ಸಭೆಯ ನಡಾವಳಿಗಳ ಮೇಲೆ ತೆಗೆದುಕೊಂಡ ಕ್ರಮ, ಪ್ರಗತಿಯ ವರದಿ ಹಾಗೂ ಕ್ರಿಯಾ ಯೋಜನೆ ಮಂಡಿಸಿದರು. ಸದರಿ ಕಾರ್ಯಕ್ರಮದಲ್ಲಿ ವೈಜ್ಞಾನಿಕ ಸಲಹಾ ಸಮಿತಿ ಸದಸ್ಯರು ಹಾಗೂ ರೈತ ಪ್ರತಿನಿಧಿಗಳು ಭಾಗವಹಿಸಿ ಸೂಕ್ತ ಸಲಹೆ ಸೂಚನೆಗಳನ್ನು ನೀಡಿದರು. ಇದೇ ಸಂದರ್ಭದಲ್ಲಿ ವಲಯ ಯೋಜನಾ ನಿರ್ದೇಶಕರು ವಿವಿಧ ಬೆಳೆಗಳ ಮುಂಚೂಣಿ ಪ್ರಾತ್ಯಕ್ಷಿಕೆ ತಾಕುಗಳಿಗೆ ಭೇಟಿ ನೀಡಿ ಫಲಾನುಭವಿಗಳೊಂದಿಗೆ ಚರ್ಚಿಸಿದರು.

## ವನಮಹೋತ್ಸವ ಆಚರಣೆ

ಕೃಷಿ ವಿಜ್ಞಾನ ಕೇಂದ್ರ, ಸೈದಾಪೂರ ಫಾರ್ಮ್, ಧಾರವಾಡ ವತಿಯಿಂದ ದಿನಾಂಕ: 19.07.2014 ರಂದು ಕುಂದಗೋಳ ತಾಲೂಕಿನ ಕುಂಕೂರ ಗ್ರಾಮದ ಶ್ರೀ ಗಂಗಪ್ಪ ಹಿತ್ತಲಮನಿ ಇವರ ತೋಟದಲ್ಲಿ ಹಾಗೂ ದಿನಾಂಕ: 12.08.2014 ರಂದು ಧಾರವಾಡ ತಾಲೂಕಿನ ಗರಗ ಗ್ರಾಮದ ಶ್ರೀ ಅಡವಯ್ಯಸ್ವಾಮಿ ಕಳ್ಳಿಮಠ ಇವರ ತೋಟದಲ್ಲಿ ಸಮಗ್ರ ಕೃಷಿ ಪದ್ಧತಿಯ ಮುಂಚೂಣಿ ಪ್ರಾತ್ಯಕ್ಷಿಕೆಯ ಅಂಗವಾಗಿ ಪ್ರಗತಿಪರ ರೈತರು ವಿವಿಧ ಹಣ್ಣಿನ ಗಿಡಗಳನ್ನು ನಾಟಿ ಮಾಡುವುದರ ಮೂಲಕ ವನಮಹೋತ್ಸವ ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಚರಿಸಲಾಯಿತು. ಇದೇ ರೀತಿ ಕೃಷಿ ವಿಜ್ಞಾನ ಕೇಂದ್ರ, ಸೈದಾಪೂರ ಫಾರ್ಮ್, ಧಾರವಾಡದಲ್ಲಿ ದಿನಾಂಕ: 26.08.2014 ರಂದು ವಿವಿಧ ಹಣ್ಣಿನ ಗಿಡಗಳನ್ನು ನಾಟಿ ಮಾಡುವುದರ ಮೂಲಕ ವನಮಹೋತ್ಸವ ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಚರಿಸಲಾಯಿತು.







## ವಿದೇಶಕ್ಕೆ ಭೇಟಿ



ತೋಟಗಾರಿಕೆ ಪ್ರಾಧ್ಯಾಪಕರು ಹಾಗೂ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಡಾ. ಎಸ್. ಎಂ. ಮಂಟೂರ ಇವರು 17–22, ಆಗಸ್ಟ 2014 ರವರೆಗೆ ಆಸ್ಟ್ರೇಲಿಯಾದ ಬ್ರಿಸ್‌ಬೇನ್‌ದಲ್ಲಿ ಜರುಗಿದ 29 ನೇ ಅಂತರಾಷ್ಟ್ರೀಯ ತೋಟಗಾರಿಕೆ ಸಮ್ಮೇಳನದಲ್ಲಿ ಭಾಗವಹಿಸಿ ಸಂಶೋಧನಾ ಪ್ರಬಂಧವನ್ನು ಮಂಡಿಸಿದರು. ಇದಲ್ಲದೇ ಆರೋಗ್ಯಕ್ಕಾಗಿ ಹಣ್ಣು ಮತ್ತು ತರಕಾರಿಗಳು ಎಂಬ ವಿಚಾರ ಸಂಕಿರಣದ ಗೋಷ್ಠಿಯ ಅಧ್ಯಕ್ಷತೆಯನ್ನು ಸಹ ವಹಿಸಿದ್ದರು. ಡಾ. ಮಂಟೂರ ಕ್ಯಾನ್‌ಬೆರಾದಲ್ಲಿಯ ಆಸ್ಟ್ರೇಲಿಯಾದ ಅಂತರಾಷ್ಟ್ರೀಯ ಕೃಷಿ ಸಂಶೋಧನಾ ಕೇಂದ್ರದ ಆಹ್ವಾನದ ಮೇರೆಗೆ ಅಲ್ಲಿಯ ಸಂಶೋಧನಾ ಕಾರ್ಯಕ್ರಮ ವ್ಯವಸ್ಥಾಪಕರಾದ ಡಾ. ಎಂ. ಇಜಾಜ್ ಖುರೇಶಿ ಮತ್ತು ಡಾ. ಪೀಟರ್ ಹಾರ್ನ, ವ್ಯವಸ್ಥಾಪಕರು, ಕಂಟ್ರಿ ಪ್ರೋಗ್ರಾಮ್ ಇವರೊಂದಿಗೆ ಸಭೆಯಲ್ಲಿ ಭಾಗವಹಿಸಿದ್ದರು. ಕ್ಯಾನ್‌ಬೇರಾದ ಕಾಮನ್‌ವೆಲ್ತ್ ಸೈಂಟಿಫಿಕ್ ಆಂಡ್ ಇಂಡಸ್ಟ್ರಿಯಲ್ ರಿಸರ್ಚ್ ಆರ್ಗನೈಸೆಶನ್‌ಗೆ ಭೇಟಿ ಕೊಟ್ಟು, ಕೇಂದ್ರದ ವಿಜ್ಞಾನಿಗಳೊಂದಿಗೆ ಆ ಕೇಂದ್ರದ ಸಂಶೋಧನಾ ಚಟುವಟಿಕೆಗಳ ಬಗ್ಗೆ ಚರ್ಚಿಸಿದರು.



## ಪ್ರಾಯೋಜಿತ ತರಬೇತಿಗಳು

ಕೃಷಿ ವಿಜ್ಞಾನ ಕೇಂದ್ರ, ಸೈದಾಪೂರ ಫಾರ್ಮ, ಧಾರವಾಡ ಹಾಗೂ ತೆಂಗು ಅಭಿವೃದ್ದಿ ಮಂಡಳಿ ಇವರುಗಳ ಸಂಯುಕ್ತ ಆಶ್ರಯದಲ್ಲಿ ಮರ ಏರುವ ಸೈಕಲ್ ಬಳಸಿ ತೆಂಗಿನ ಮರ ಹತ್ತಿ ಕಾಯಿ ಕೀಳುವ ಮತ್ತು ಹೆಡೆ ಶುಚಿಗೊಳಿಸುವ ಕೌಶಲ್ಯ ಅಭಿವೃದ್ಧಿ ಕುರಿತು ಆರು ದಿನಗಳ ಮೂರು ತರಬೇತಿಗಳನ್ನು (14–19, ಜುಲೈ ಹಾಗೂ 25–30, ಸೆಪ್ಟೆಂಬರ್ 2014) ಕೇಂದ್ರದ ಆವರಣದಲ್ಲಿ ಆಯೋಜಿಸಲಾಗಿತ್ತು. ತರಬೇತಿಯ ಉದ್ಘಾಟನಾ ಸಮಾರಂಭಕ್ಕೆ ಧಾರವಾಡ ಕೃಷಿ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶಕರಾದ ಡಾ. ಎಂ. ಬಿ. ಚೆಟ್ಟಿ ಹಾಗೂ ನಬಾರ್ಡನ ಜಿಲ್ಲಾ ವ್ಯವಸ್ಥಾಪಕರಾದ ಶ್ರೀಮತಿ. ಶೀಲಾ ಭಂಡಾರಕರ್ ಇವರು ಅತಿಥಿಗಳಾಗಿ ಭಾಗವಹಿಸಿದ್ದರು. ತರಬೇತಿಯ ಮುಕ್ತಾಯ ಸಮಾರಂಭಕ್ಕೆ ಧಾರವಾಡ ಕೃಷಿ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಡಾ. ಡಿ. ಪಿ. ಬಿರಾದಾರ ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ನುರಿತ ಕಾಯಿ ಇಳಿಸುವವರ ಸಮಸ್ಯೆ ನೀಗಿಸಲು ಮರ ಏರುವ ಸೈಕಲ್ ಬಳಸಿ ಯುವಕರು ಸ್ವಾವಲಂಬಿಗಳಾಗುವಂತೆ ಕರೆ ನೀಡಿದರು. ಧಾರವಾಡ, ಹಾವೇರಿ, ಬೆಳಗಾವಿ, ಗದಗ ಹಾಗೂ ಬಾಗಲಕೋಟ ಜಿಲ್ಲೆಯ ಒಟ್ಟು 60 ಗ್ರಾಮೀಣ ಯುವಕರು ಈ ತರಬೇತಿಯಲ್ಲಿ ಭಾಗವಹಿಸಿದ್ದರು. ಕುಲಪತಿಗಳು ಭಾಗವಹಿಸಿದ ಶಿಬಿರಾರ್ಥಿಗಳಿಗೆ ಉಚಿತವಾಗಿ ಮರ ಏರುವ ಸೈಕಲ್ ಹಾಗೂ ಪ್ರಶಸ್ತಿ ಪತ್ರಗಳನ್ನು ವಿತರಿಸಿದರು.







ರಾಷ್ಟ್ರೀಯ ಗ್ರಾಮೀಣ ಕೃಷಿ ಅಭಿವೃದ್ಧಿ ಬ್ಯಾಂಕ್‌ನ (ನಬಾರ್ಡ) ಆರ್ಥಿಕ ಸಹಯೋಗದೊಂದಿಗೆ ತಂತ್ರಜ್ಞಾನ ವರ್ಗಾವಣೆ, ಸಾಲ ಮತ್ತು ಮಾರುಕಟ್ಟೆ ಮಾರ್ಗದರ್ಶನ ಕುರಿತು ಪೈಲಟ್ ಯೋಜನೆಯಡಿಯಲ್ಲಿ ಜಿಲ್ಲೆಯ ವಿವಿಧ ರೈತಕೂಟಗಳ ಮಾಸ್ಟರ್ ತರಬೇತಿದಾರರ ಮುಖಾಂತರ ಆಯಾ ಗ್ರಾಮದ ರೈತಕೂಟ ಸದಸ್ಯರುಗಳಿಗೆ "ವಿವಿಧ ಬೆಳೆಗಳ ಉತ್ಪಾದನೆ ಮಾಹಿತಿ ಕುರಿತು" ವಿವಿಧ ಗ್ರಾಮಗಳಲ್ಲಿ (ಲಿಂಗನಕೊಪ್ಪ–09.08.14, ನೀರಸಾಗರ–09.08.14, ಮುಕ್ಕಳ–10.08.14, ದ್ಯಾವನಕೊಂಡ–10.08.14, ದಾಸ್ತಿಕೊಪ್ಪ–10.08.14, ಬೆಲವಂತರ–11.08.14, ಮೊರಬ–12.08.14, ಮೊರಬ–12.08.14, ಹಳ್ಳಿಗೇರಿ–20.08.14, ಮುಳಮುತ್ತಲ–20.08.14, ಜೀರಗವಾಡ–20.08.14, ಶೇಡಬಾಳ–ಖಾನಾಪುರ–20.08.14, ಛಬ್ಬಿ–20.09.14) ಕೃಷಿ ವಿಜ್ಞಾನ ಕೇಂದ್ರದ ನೇತೃತ್ವದಲ್ಲಿ ಒಟ್ಟು 13 ಹೊರ ಆವರಣ ತರಬೇತಿಗಳನ್ನು ಆಯೋಜಿಸಲಾಗಿತ್ತು.





## ಈರುಳ್ಳಿ ಬೆಳೆಯ ವೈರವರ್ಮ (Wireworm) ಕೀಟಬಾಧೆ ಸಮಸ್ಯಾತ್ಮಕ ಕ್ಷೇತ್ರಗಳಿಗೆ ಭೇಟಿ ಹಾಗೂ ಸಲಹೆ



ನವಲಗುಂದ ತಾಲೂಕಿನ ಮೊರಬ, ಗುಮ್ಮಗೋಳ, ಆಹೆಟ್ಟಿ ಮತ್ತು ಶಿರೂರು ಗ್ರಾಮಗಳಲ್ಲಿ ಪ್ರಪ್ರಥಮವಾಗಿ ಈರುಳ್ಳಿ ಬೆಳೆಗೆ ವೈರವರ್ಮ (Wireworm) ಕೀಟಬಾಧೆ ಕಂಡುಬಂದಿದೆ. ಈ ಕೀಟಬಾಧೆಯ ಪ್ರಮಾಣ ಶೇ. 15–20 ರಷ್ಟು ಕಂಡುಬಂದಿದೆ ಹಾಗೂ ಇಳುವರಿಯಲ್ಲಿ ಇಳಿಮುಖ ಕಂಡುಬರುವ ಸಾಧ್ಯತೆಯಿದೆ ಎಂದು ರೈತರಿಗೆ ಮನವರಿಕೆ ಮಾಡಿಕೊಡಲಾಯಿತು. ಹತೋಟಿಗಾಗಿ ರಿನಾಕ್ಸಿಫೈರ್ ಅಥವಾ ಫಿಪ್ರೋನಿಲ್ ಹರಳುಗಳನ್ನು ಪ್ರತಿ ಎಕರೆಗೆ 6 ಕೆ.ಜಿ ಯಂತೆ ಸಮಪ್ರಮಾಣದ ಉಸುಕಿನೊಂದಿಗೆ ಮಿಶ್ರಣ ಮಾಡಿ ಹೊಲದಲ್ಲಿ ತೇವಾಂಶವಿದ್ದಾಗ ಎರಚಬೇಕೆಂದು ಇಲ್ಲವೆ ಸಂಯುಕ್ತ ಕೀಟನಾಶಕವಾದ ಫಿಪ್ರೋನಿಲ್ 40% + ಇಮಿಡಾಕ್ಲೋಪ್ರೀಡ 40% (ಲೆಸೆಂಟ್)ನ್ನು 0.25 ಗ್ರಾಂ. ನಂತೆ ಅಥವಾ ಕ್ಲೋರೋಪೈರಿಫಾಸ್‌ನ್ನು 2 ಮಿ.ಲಿ.ನಂತೆ ಪ್ರತಿ ಲೀ. ನೀರಿಗೆ ಬೆರೆಸಿ ಬೇರು ಚೆನ್ನಾಗಿ ತೊಯ್ಯುವಂತೆ ಸಿಂಪರಣೆ ಕೈಗೊಳ್ಳಬೇಕೆಂದು ತಾತ್ಕಾಲಿಕ ಶಿಫಾರಸ್ಸು ಮಾಡಲಾಯಿತು.





# ಕೇಂದ್ರಕ್ಕೆ ಗಣ್ಯರ ಭೇಟಿ



ಆಫ್ರಿಕಾ ದೇಶದ ವಿಜ್ಞಾನಿಗಳ ತಂಡದ ಸದಸ್ಯರುಗಳಾದ Bunda College, Malawi, Lilongwe University of Agriculture and Natural Resources, Africa comprising Dr. Vernon Kabambe (Agronomist), Dr. Moses Maliro (Plant Breeder), Dr. Patson Nalivata (Soil Chemist), Dr. Trust Kasambala (Agril Entomologist) and Dr. Josef Djanza (Agricultural Economist) ಗಳೊಂದಿಗೆ ಹೈದರಾಬಾದ ಸತ್‌ಗುರು ಸಲಹೆಗಾರರಾದ ಕುಮಾರಿ ನಮಿತಾ ಬನಸಾಲ್ ಇವರುಗಳು ಕೃಷಿ ವಿಜ್ಞಾನ ಕೇಂದ್ರಕ್ಕೆ ದಿ: 23.07.2014 ರಂದು ಭೇಟಿ ನೀಡಿದರು. ಈ ಸಂದರ್ಭದಲ್ಲಿ ಕೇಂದ್ರ ಮುಖ್ಯಸ್ಥರಾದ ಡಾ. ಎಸ್. ಎಮ್. ಮಂಟೂರ ಇವರು ಕೇಂದ್ರದ ವಿವಿಧ ಪ್ರಾತ್ಯಕ್ಷಿಕೆ ಘಟಕಗಳು ಹಾಗೂ ವಿಸ್ತರಣಾ ಚಟುವಟಿಕೆಗಳ ಬಗ್ಗೆ ವಿವರಿಸಿದರು.



ಆಫ್ರಿಕಾ ದೇಶದ ವಿಜ್ಞಾನಿಗಳ ತಂಡದ ಸದಸ್ಯರುಗಳಾದ Dr. George Kanyama Phiri, Vice Chancellor and Dr. Charles Macphery Masangano of Lilongwe University of Agriculture and Natural Resources, Bunda Campus, Lilongwe, Malawi, Dr. Geoffrey Kananji, Country Co-ordinator, Alliance for Green Revolution in Africa, Malawi team ದೊಂದಿಗೆ ಹೈದರಾಬಾದ ಸತ್‌ಗುರು ಸಲಹೆಗಾರರಾದ ಶ್ರೀ. ಸುರೇಶ ಇವರುಗಳು ಕೃಷಿ ವಿಜ್ಞಾನ ಕೇಂದ್ರಕ್ಕೆ ದಿ: 11.09.2014 ರಂದು ಭೇಟಿ ನೀಡಿದರು.



ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ನಿವೃತ್ತ ಮಹಾ ನಿರ್ದೇಶಕ ಮತ್ತು ಕೃಷಿ ಸಂಶೋಧನೆ ಹಾಗೂ ಶಿಕ್ಷಣ ವಿಭಾಗದ ಕಾರ್ಯದರ್ಶಿಗಳಾದ ಡಾ. ಆರ್. ಎಸ್. ಪರೋಡ ಇವರೊಂದಿಗೆ ಕೃಷಿ ವಿಶ್ವವಿದ್ಯಾಲಯ, ಧಾರವಾಡದ ಮಾನ್ಯ ಕುಲಪತಿಗಳಾದ ಡಾ. ಡಿ. ಪಿ. ಬಿರಾದಾರ, ಸಂಶೋಧನಾ ನಿರ್ದೇಶಕರಾದ ಡಾ. ಬಿ. ಎಮ್. ಖಾದಿ ಇವರುಗಳು ಧಾರವಾಡದ ಕೃಷಿ ವಿಜ್ಞಾನ ಕೇಂದ್ರಕ್ಕೆ ದಿ: 16.09.2014 ರಂದು ಭೇಟಿ ನೀಡಿದರು. ಈ ಸಂದರ್ಭದಲ್ಲಿ ಕಾರ್ಯಕ್ರಮ ಸಂಯೋಜಕರಾದ ಡಾ. ಎಸ್. ಎಮ್. ಮಂಟೂರ ಇವರು ಕೇಂದ್ರದ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು.





ನವ ದೆಹಲಿಯ ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ಉಪ ಮಹಾನಿರ್ದೇಶಕ (ತೋಟಗಾರಿಕೆ)ರಾದ ಡಾ. ಎನ್. ಕೆ. ಕೃಷ್ಣಕುಮಾರ ಹಾಗೂ ಬಾಗಲಕೋಟ ತೋಟಗಾರಿಕೆ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಡಾ. ಡಿ. ಎಲ್. ಮಹೇಶ್ವರ ಇವರೊಂದಿಗೆ ಧಾರವಾಡ ಕೃಷಿ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಡಾ. ಡಿ. ಪಿ. ಬಿರಾದಾರ ಇವರುಗಳು ಕೃಷಿ ವಿಜ್ಞಾನ ಕೇಂದ್ರಕ್ಕೆ ದಿ: 20.09.2014 ರಂದು ಭೇಟಿ ನೀಡಿದರು.

ಈ ಸಂದರ್ಭದಲ್ಲಿ ಕಾರ್ಯಕ್ರಮ ಸಂಯೋಜಕರಾದ ಡಾ. ಎಸ್.ಎಮ್. ಮಂಟೂರ ಇವರು ಗಣ್ಯರನ್ನು ಸ್ವಾಗತಿಸುತ್ತ ಕೇಂದ್ರದ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಸದರಿ ಅತಿಥಿಗಳೊಂದಿಗೆ ವಿಶ್ವವಿದ್ಯಾಲಯದ ತೋಟಗಾರಿಕೆ ವಿಜ್ಞಾನಿಗಳು ಹಾಗೂ ವಿದ್ಯಾರ್ಥಿಗಳೊಂದಿಗೆ ತೋಟಗಾರಿಕೆಯ ಅಭಿವೃದ್ಧಿ ಕುರಿತು ಸಂವಾದ ಜರುಗಿತು. ಈ ಸುಸಂದರ್ಭದಲ್ಲಿ ಡಾ. ಡಿ. ಎಲ್. ಮಹೇಶ್ವರ ಇವರಿಗೆ ಡಾ. ಡಿ. ಪಿ. ಬಿರಾದಾರ ಇವರು ಫಲಪುಷ್ಪ ನೀಡಿ ಸನ್ಮಾನಿಸಿದರು.


**ಸಂಪಾದಕರು ಹಾಗೂ ಪ್ರಕಾಶಕರು** : ಡಾ. ಎಸ್. ಎಮ್. ಮಂಟೂರ
ಕಾರ್ಯಕ್ರಮ ಸಂಯೋಜಕರು, ಕೃಷಿ ವಿಜ್ಞಾನ ಕೇಂದ್ರ, ಧಾರವಾಡ

**ಸಹ ಸಂಪಾದಕರು** : ಡಾ. ಎಸ್. ಎಮ್. ಹಿರೇಮಠ, ಡಾ. ಉಮಾ ಎನ್. ಕುಲಕರ್ಣಿ, ಡಾ. ಕೆ. ಪಿ. ಗುಂಡಣ್ಣವರ, ಶ್ರೀಮತಿ ಶೈಲಜಾ ಎನ್. ಗಲಗಲಿ, ಡಾ. ಪಿ. ಜೆ. ಕುಮಾರ

**ಅಕ್ಷರ ಜೋಡಣೆ ಮತ್ತು ವಿನ್ಯಾಸ** : ಡಿಟಿಪಿ, ಘಟಕ
ಪ್ರಕಟಣಾ ಕೇಂದ್ರ, ಕೃವಿವಿ, ಧಾರವಾಡ

**ಬೆರಳಚ್ಚುಗಾರರು** : ಶ್ರೀ. ಸಂತೋಷ ಬಿ. ಕುಂಬಾರ



ಇಂದ,
ಕಾರ್ಯಕ್ರಮ ಸಂಯೋಜಕರು
ಕೃಷಿ ವಿಜ್ಞಾನ ಕೇಂದ್ರ, ಸೈದಾಪುರ ಫಾರ್ಮ
ಧಾರವಾಡ 580 005 (ಕರ್ನಾಟಕ)
ದೂರವಾಣಿ : 0836-2444272
ಮಿಂಚಂಚೆ : pc_kvkd@rediffmail.com
ವೆಬ್‌ಸೈಟ್ : www.kvkdharwad.org


ಗೆ,

ತೆರೆದ ಅಂಚೆ

